The Hon'ble H. C. DASAPPA.—A number of retrenchments have been effected; Farm labour, Cattle Yard Manager, 2 Supervisors, 2 Attenders, 3 Messengers and so on and the Principal's pay has been reduced from Rs. 1,400 *plus* 100. Four posts of Boilers in the Jaggery Unit; Active Carbon Unit involving a saving of Rs. 3,400; Anjanpur Farm savings Rs. 5,400; nine posts of clerks; nine posts of fieldmen; large-scale farms are closed at Malavalli, Dhangur, Singapur, except the Farm at Malavalli and so on. I can place the order.

ಶ್ರೀ ಎಸ್. ರಂಗರಾಮಯ್ಯನವರು.—ಯಾವ ವರ್ಷಕ್ಕೆ ಈ ಸೇವಿಂಗ್ಸ್ ತೋರಿಸಿರುವುದು? ಒಂದು ವರ್ಷದ್ದೇ ಅಥವಾ 2-3-ವರ್ಷದ್ದೂ ಸೇರಿದೆಯೇ;

The Hon'ble H. C. DASAPPA.—Probably 1950-51; after the Economy Officer's Report was received.

Sri M. GOVINDA REDDY (Chitaldrug District—General).—Did the Government ,re-employ them in any of the posts retrenched ?

The Hon'ble H. C. DASAPPA.—Notice; I do not think so.

Opening an Industrial School at Sravanabelagola for imparting training in the manufacture of copper and brass vessels.

*ಪ್ರಶ್ನೆ 162.—**ಶ್ರೀ ಡಿ. ಗೋವಿಂದದಾಸ್**ರವರು (ಹಾಸನ ಡಿಸ್ಟ್ರಿಕ್ಟ್—ನಿಮ್ನ ತರಗತಿಗಳವರ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಮೈಸೂರು ಸಂಸ್ಥಾನದಲ್ಲಿ ಶ್ರವಣಬೆಳಗೊಳವು ಹಿತ್ತಾಳೆ ಮತ್ತು ತಾಮ್ರದ ಕೈಗಾರಿಕೆಗೆ ಅತ್ಯಂತ ಪ್ರಸಿದ್ಧವಾದ ಕೇಂದ್ರವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

(b) ಈ ಕೈಗಾರಿಕೆಯನ್ನು ಉತ್ತಮಗೊಳಿಸುವುದಕ್ಕಾಗಿ ಆ ಸ್ಥಳದಲ್ಲಿ ಒಂದು ಕೈಗಾರಿಕೆ ಸ್ಕೂಲಿನ ಆವಶ್ಯಕತೆಯನ್ನು ಒತ್ತಾಯಪಡಿಸಿ ಸಾರ್ವಜನಿಕರಿಂದ ಮನವಿಯೇನಾದರೂ ಬಂದಿದೆಯೆ;

(c) ತಾಮ್ರ ಮತ್ತು ಹಿತ್ತಾಳೆ ಪಾತ್ರೆಗಳ ತಯಾರಿಕೆಯ ಸಂಬಂಧದಲ್ಲಿ ಶಿಕ್ಷಣವನ್ನು ಕೊಡುವುದಕ್ಕಾಗಿ ಈಗಲಾದರೂ ಸಹ, ಈ ಸ್ಥಳದಲ್ಲಿ ಒಂದು ಸ್ಕೂಲನ್ನು ಏರ್ಪಡಿಸುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆ?

ಉತ್ತರ.—**ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು** (ಹಣಕಾಸಿನ ಮತ್ತು ಕೈಗಾರಿಕೆಗಳ ಶಾಖೆಗಳ ಸಚಿವರು).—

(a) ಹೌದು, ಬಂದಿದೆ.

(b) ಇದುವರೆವಿಗೂ ಯಾವ ಮನವಿಯೂ ಬಂದಿಲ್ಲ.

(c) ಪರ್ಯಾಲೋಚಿಸಲಾಗುವುದು.

ಶ್ರೀ ಡಿ. ಗೋವಿಂದದಾಸ್ರವರು.—ಶ್ರವಣಬೆಳಗೊಳ ಹಿತ್ತಾಳೆ ಪಾತ್ರೆಗೆ ಪ್ರಸಿದ್ಧವಾದುದು ಎಂಬುದು ಗೊತ್ತೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಉತ್ತರದಲ್ಲೇ ಹೇಳಿದೆ.

ಶ್ರೀ ಡಿ. ಗೋವಿಂದದಾಸ್ರವರು.—ಅಲ್ಲಿಗೆ ಒಂದು ಇಂಡಸ್ಟ್ರಿಯಲ್ ಸ್ಕೂಲನ್ನು ಸ್ಥಾಪನೆಮಾಡಬೇಕೆಂದು ಸರ್ಕಾರದವರ ಅಭಿಪ್ರಾಯವಿದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸದ್ಯಕ್ಕೆ ಏನೂ ಇಲ್ಲ. ಯೋಚನೆಮಾಡಲಾಗುತ್ತದೆ.

ಶ್ರೀ ಡಿ. ಗೋವಿಂದದಾಸ್ರವರು.—ಆ ಸುತ್ತಮುತ್ತಲ ಪ್ರದೇಶದ ಜನಗಳಿಂದ ಸರ್ಕಾರದವರಿಗೆ ಮನವಿ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ.

ಶ್ರೀ ಡಿ. ಗೋವಿಂದದಾಸ್ರವರು.—ಮನವಿ ಬರಲಿ ಎಂದು ಕಾದಿದ್ದೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಮನವಿ ಬರಬೇಕಾಗಿಲ್ಲ, ಯಾವುದಾದರೂ ಕ್ಷೇತ್ರದಲ್ಲಿ ಸ್ಥಾಪನೆ ಮಾಡಬೇಕಾದ ಅಗತ್ಯ ಕಂಡುಬಂದರೆ ಮನವಿಮಾಡದೇ ಇದ್ದರೂ ಮಾಡುವುದುಂಟು.

ಶ್ರೀ ಡಿ. ಗೋವಿಂದದಾಸ್ರವರು.—ಅಲ್ಲಿ ತಯಾರಾದ ಪಾತ್ರೆಗಳು ನಮ್ಮ ದೇಶದಲ್ಲಿ ಅಲ್ಲದೆ ಪರದೇಶಗಳಿಗೂ ಹೋಗುವುದು ಗೊತ್ತೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹೋಗುತ್ತಾ ಇರಬಹುದು.

ಶ್ರೀ ಡಿ. ಗೋವಿಂದದಾಸ್ರವರು.—ಅಲ್ಲಿ ಮನವಿ ಬರದೇ ಇದ್ದರೂ ಒಂದು ಇಂಡಸ್ಟ್ರಿಯಲ್ ಸ್ಕೂಲನ್ನು ಸ್ಥಾಪನೆಮಾಡಿದರೆ ಬಹಳ ಪ್ರಯೋಜನವಾಗುವುದರಿಂದ ಸರ್ಕಾರದವರು ಆದಷ್ಟು ಜಾಗ್ರತೆ ಸ್ಥಾಪನೆ ಮಾಡಲು ಪ್ರಯತ್ನ ಪಡಬೇಕು ಎಂದು ಹೇಳಿದರೆ ಒಪ್ಪಿಕೊಳ್ಳುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ನಮ್ಮ ಗಮನಕ್ಕೆ ತಂದಮೇಲೆ ಯೋಚನೆಮಾಡಲಾಗುತ್ತದೆ.

Mr. SPEAKER.—Question hour is over.

UNSTARRED QUESTION

(to which answers were laid on the table).

Production of Pig Iron and Steel in Iron and Steel Works.

*Q. 50.—**Sri H. M. MALLIKARJUNAPPA** (Chikmagalur District—General).—

Will the Government be pleased to state :—

How many tons of pig iron and steel had been produced in the Iron and Steel Works, Bhadravati since 1945 June to end of 1951 January (yearwar details to be given) ?